ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/462/ಎಸಿಎಂ(2)/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು - 560 001,
ದಿನಾಂಕ:22-05-2013.

**-:: ಸುತ್ತೋಲೆ ::-**

**ವಿಷಯ:** 2013-14ನೇ ಸಾಲಿನಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸೇರ ಬಯಸುವ CBSE ಪರೀಕ್ಷೆ ಬರೆದು ಫಲಿಂತಾಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿ ಸಮಸಂಖ್ಯೆ ಪ್ರವೇಶಾಧಿಸೂಚನೆ ದಿನಾಂಕ:17-05-2013.
2. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013.

**-0000000-**

ಉಲ್ಲೇಖ(1)ರ ಈ ಕಛೇರಿ ಪ್ರವೇಶಾಧಿಸೂಚನೆಯಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು **ದಿನಾಂಕ: 25-05-2013 ರಂದು** ಕಡೆಯ ದಿನಾಂಕವಾಗಿರುತ್ತದೆ. ಆದರೆ, CBSE (Central Board of Secondary Education) ಪರೀಕ್ಷೆ ಬರೆದ ಅಭ್ಯರ್ಥಿಗಳ ಫಲಿತಾಂಶ ಇನ್ನೂ ಪ್ರಕಟವಾಗಿರದ ಕಾರಣ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, CBSE ಪರೀಕ್ಷೆ ಬರೆದ ಅಭ್ಯರ್ಥಿಗಳು ರಾಜ್ಯದ 45 Online Application Submission/Document Verification Centre ಗಳಲ್ಲಿ ಅರ್ಜಿಯನ್ನು ಪಡೆದು, ಅರ್ಜಿಯಲ್ಲಿನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಕಾಲಂಗಳಲ್ಲಿ ಫಲಿತಾಂಶ ಬಾರದಿದ್ದ ಪಕ್ಷದಲ್ಲಿ ಶೂನ್ಯ ಎಂದು ನಮೂದಿಸಿ **ದಿನಾಂಕ: 25-05-2013 ರೊಳಗೆ** ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.

**ನಂತರ ದಿನಾಂಕ:29-05-2013ರಂದು ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಇಲಾಖೆಯ www.dtekarnataka.in, www.diplomaadmission.in & www.dte.kar.nic.in ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗುವುದು. ಆಗ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:31-05-2013ರವರೆಗೆ ಸಮಯವಕಾಶವಿರುತ್ತದೆ. ಆ ಸಂದರ್ಭದಲ್ಲಿ ತಾವುಗಳು CBSE ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ನಮೂದಿಸಿ ಆಯಾ 45 Online Application Submission/Document Verification Centre ಗಳಲ್ಲಿ ಸಲ್ಲಿಸಬಹುದು.**

ನಿರ್ದೇಶಕರು

ಗೆ,

ಎಲ್ಲಾ 45 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ (Online Application Submission/Document Verification Centre)

**ಪ್ರತಿ:-**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ತಾಂ.ಶಿ.ನಿ, (ಈ ಸುತ್ತೋಲೆಯನ್ನು ನಿರ್ದೇಶನಾಲಯದ ಅಂತರ್ ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸುವುದು). 6. ಕಛೇರಿ ಪ್ರತಿ.

File 462-12 (Dip_ADm_2013)